# ACADEMIC MASTER PLAN

## 2025-2026

## I STANDARD

S M M A.U.P SCHOOL
MUNDITHADKA

ಮುನ್ನುಡಿ :

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳ ಶೈಕ್ಷಣಿಕ ಮಟ್ಟದ ಕುರಿತು ನಾವು ಬಹಳಷ್ಟು ಚಿಂತಿಸಬೇಕಾಗಿದೆ. ಎಷ್ಟು ನೀಡಿದರೂ ಸಾಲದೇ ಇರುವಾಗ ಇನ್ನಷ್ಟು ಸೂಕ್ಷ್ಮವಿಚಾರಗಳ ಕುರಿತು ಮಕ್ಕಳಿಗೆ ತಿಳಿಸುವುದು ಆಳವಾದ ಅಧ್ಯಯನ ನಡೆಸುವಲ್ಲಿ ಪ್ರೇರೇಪಿಸುವುದು ನಮ್ಮ ಕರ್ತವ್ಯ. ಒಂದನೇ ತರಗತಿಗೆ ದಾಖಲಿಸುವಾಗ ಹಲವು ವಿಚಾರಗಳನ್ನು, ಅನುಭವಗಳನ್ನು ತನ್ನ ಮನೆ, ಮನೆಯ ಪರಿಸರದ ಮೂಲಕ ಪಡೆದು ಬಂದಿರುವ ಮಕ್ಕಳಿಗೆ ಅವುಗಳನ್ನು ಇನ್ನಷ್ಟು ಆಳವಾಗಿ ತಿಳಿಸುವಲ್ಲಿ ಹಾಗೂ ತಿಳಿದ ವಿಚಾರಗಳನ್ನು ಅಕ್ಷರ ರೂಪಗಳಲ್ಲಿ ವ್ಯಕ್ತ ಪಡಿಸಲು ಸಹಾಯಕವಾಗುವ ಕಲಿಕಾ ಪ್ರಕ್ರಿಯೆಯನ್ನು ಒಂದನೇ ತರಗತಿ ಅಧ್ಯಾಪಕರು ನೀಡಬೇಕಾಗಿದೆ. ೨೦೨೫-೨೬ನೇ ಅಧ್ಯಯನ ವರ್ಷದಲ್ಲಿ ಹೊಸ ಕಲಿಕಾ ಕಪ್ಪಗಳೊಂದಿಗೆ ಹೊಂಸತಾಗಿ ಬರುವ ಕಲಿಕಾರ್ಥಿಗಳಿಗೆ ಹೊಸತನವನ್ನು ನೀಡುವಲ್ಲಿ ಈ master plan ಸಹಾಯಕವಾಗಲೆಂಬ ನಿರೀಕ್ಷೆಯೊಂದಿಗೆ ಈ master planನ್ನು ತಯಾರಿಸಿರುವೆನು. ಈ ಅಧ್ಯಯನ ವರ್ಷದ ಕೊನೆಗೆ ತರಗತಿಯ ಎಲ್ಲಾ ಮಕ್ಕಳನ್ನೂ ಓದಲು ಬರೆಯಲು ಸಾಧ್ಯವಾಗಿಸುವಲ್ಲಿ ಇದು ಸಹಾಯಕವಾಗಲೆಂಬ ಭರವಸೆಯೊಂದಿಗೆ......

ಕನ್ನಡ

| ಕಲಿಕಾ ಉದ್ದೇಶ | ಚಟುವಟಿಕೆ | ಉತ್ಪನ್ನ | ಬೆಂಬಲ | ಅವಧಿ |
| --- | --- | --- | --- | --- |
| * ಪೇಶಿಯ ಚಲನೆಗೆ ಸಂಬಂಧಿಸಿದ ಚಟುವಟಿಕೆಗಳು | • ಆಟ<br>• ಅಭಿನಯ ಗೀತೆ<br>• ಚಿತ್ರ ರಚನೆ<br>• ಚಿತ್ರಕ್ಕೆ ಬಣ್ಣ ನೀಡುವುದು | • ಚಿತ್ರ<br>• ಬಣ್ಣ ನೀಡಿದ ಚಿತ್ರ | ಅಧ್ಯಾಪಕರು-ರಕ್ಷಕರು | ಮೊದಲ 10 ದಿವಸ |
| * ಮಗು ತನ್ನ ಆಶಯಗಳನ್ನು ಬಾಯ್ದೆರೆಯಾಗಿ ಹೇಳುವುದು | • ಕಲಿಕೋಪಕರಣಗಳ ನಿರ್ಮಾಣ<br>• ಅಕ್ಷರ ಕಾರ್ಡುಗಳು, ಪದ ಕಾರ್ಡುಗಳನ್ನು ತರಗತಿಯಲ್ಲಿ ಪರಿಚಯಿಸುವುದು. | ಅಕ್ಷರ ಕಾರ್ಡ್ ಪದ ಕಾರ್ಡ್ | ತರಗತಿ ಅಧ್ಯಾಪಕರು | ಜೂನ್ |
| * ಪರಿಸರ ನಿರೀಕ್ಷಣೆಯ ಮೂಲಕ ಸಸ್ಯಗಳನ್ನು, ವಸ್ತುಗಳನ್ನು, ಜೀವಿಗಳನ್ನು ತಿಳಿದುಕೊಂಡು ಆಕಾರ, ಆಹಾರ, ವೈವಿಧ್ಯತೆಗೆ ಅನುಸರಿಸಿ ವರ್ಗೀಕರಿಸಲು ಸಾಧ್ಯವಾಗುವುದು. | • ಪದ್ಯ, ಕಥೆಗಳ video ಪ್ರದರ್ಶನ<br>• CPTA<br>• ವಾಚನಾವಾರದ ಉದ್ಘಾಟನೆ<br>• ಲೈಬ್ರರಿ ಪರಿಚಯ<br>• ಅಮ್ಮ ಓದು<br>• ತರಗತಿ ಲೈಬ್ರರಿ ಸಜ್ಜೀಕರಣ | | | |

| | | | | |
|---|---|---|---|---|
| * ಆಶಯಗ್ರಹಣ ಸಾಮರ್ಥ್ಯ, ತಿಳಿದುದನ್ನು ಬರವಣಿಗೆಯ ಮೂಲಕ ವಾಕ್ಯದ ಅಕ್ಷರಗಳನ್ನು ಈ ಪ್ರಕ್ರಿಯೆಯ ಮೂಲಕ ಓದುವ ರೀತಿಯನ್ನು ಕಂಡುಕೊಳ್ಳುವುದು. | • ಪರಿಸರ ವೀಕ್ಷಣೆ, ಮಳೆ ವೀಕ್ಷಣೆ, ಗಿಡ ನೆಡುವುದು<br>• ದಿನಾಚರಣೆಯ ಅಂಗವಾಗಿ mass drill<br>• ಕಾವ್ಯೋತ್ಸವ<br>• ರಚನೋತ್ಸವ<br>• ಸಂಯುಕ್ತ ಡ್ರಿಲ್ | Video ಗಳು<br>ಸಂಯುಕ್ತ ಡ್ರಿಲ್ | | |
| * ಸೃಜನಾತ್ಮಕತೆ, ವ್ಯಕ್ತಿಗತ ಓದುವಿಕೆ ಬರವಣಿಗೆ ಸಾಧ್ಯವಾಗುವುದು | • ತಿಳಿದ ಅಕ್ಷರಗಳನ್ನುಪಯೋಗಿಸಿ ವಿವಿಧ ಪದಗಳನ್ನು ನಿರ್ಮಿಸುವುದು, ತರಗತಿಯಲ್ಲಿ ಪ್ರದರ್ಶನ.<br>• ಚಿತ್ರ ಓದು<br>• ದಾಖಲಿಸದ ವಿಷಯಗಳನ್ನು ವರ್ಗೀಕರಿಸಲು ಅವಕಾಶ | ವಿಡಿಯೋಗಳು ಪದಗಳು | ಅಧ್ಯಾಪಕರು | ಜುಲಾಯಿ |
| * ಸರಳ ಪ್ರಯೋಗಗಳ ಮೂಲಕ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವುದು ನಿಗಮನಕ್ಕೆ ತಲುಪುವುದು | • ಕಾವ್ಯೋತ್ಸವ<br>• ರಚನೋತ್ಸವ<br>• CPTA | | | |
| * ಎಲ್ಲಾ ವಿದ್ಯಾರ್ಥಿಗಳು ವರ್ಷದ ಕೊನೆಗೆ ಓದಲು ಬರೆಯಲು ಸರಿಯಾಗಿ ತಿಳಿಯುವುದು. | • ಪದ ಕಾರ್ಡುಗಳನ್ನು ಜೋಡಿಸಿ ವಾಕ್ಯ ರಚನೆ.<br>• ಕಥೆ ಹೇಳುವುದು<br>• ಸ್ವಾತಂತ್ರ ದಿನಾಚರಣೆಗೆ ಸಂಬಂಧಿಸಿ ಬಾವುಟಕ್ಕೆ ಬಣ್ಣ ಹಚ್ಚುವುದು. | • ವಾಕ್ಯ<br>• ಬಣ್ಣ ಹಚ್ಚಿದ ಬಾವುಟ | ತರಗತಿ ಅಧ್ಯಾಪಕರು, ರಕ್ಷಕರು | ಆಗೋಸ್ತ್ |

| | | | |
|---|---|---|---|
| • ಕಾವ್ಯೋತ್ಸವ- ದೇಶಭಕ್ತಿಗೀತೆಗಳನ್ನು ಹಾಡುವುದು<br>• ಚಿತ್ರಗಳ ಹೆಸರು ಬರೆಯುವುದು<br>• ಪರೀಕ್ಷೆ ತಯಾರಿ | ವರ್ಕ್‌ಶೀಟ್ | | |
| • Onam ಆಚರಣೆ<br>• Reader Theater ಆರಂಭ<br>• ಸರಳ ಪ್ರಯೋಗಗಳಿಂದ ಆಶಯ ಕ್ರೋಢೀಕರಣ<br>• ಕಥೆಗೆ ಅನುಯೋಜ್ಯವಾದ ವಾಕ್ಯಗಳನ್ನು ಬಾಯ್ತೆರೆಯಾಗಿ ಹೇಳಿಸುವುದು.<br>• CPTA<br>• ಕಾವ್ಯೋತ್ಸವ | ಪ್ರಯೋಗ ಟಿಪ್ಪಣಿ | ಅಧ್ಯಾಪಕರು | ಸೆಪ್ಟೆಂಬರ್ |
| • ಚಿತ್ರ ನೋಡಿ ಆಶಯಗಳನ್ನು ದಾಖಲಿಸುವುದು<br>• ಪಾತ್ರಗಳನ್ನು ರೂಪಿಸಿಕೊಂಡು ಸಂಭಾಷಣೆ (mask ಧರಿಸಿ)<br>• Mask ತಯಾರಿ | ಕಿರು ಟಿಪ್ಪಣಿ | ಅಧ್ಯಾಪಕರು | ಅಕ್ಟೋಬರ್ |

| | | | |
|---|---|---|---|
| • GPTA<br>• ಕಾವ್ಯೋತ್ಸವ | | | |
| • ಮಕ್ಕಳ ದಿನಾಚರಣೆ ಆಚರಣೆ<br>• ಚಿತ್ರದ ಕುರಿತು ಮಗು ಸ್ವತಂತ್ರವಾಗಿ ಬರೆಯುವುದು.<br>• ಒಗಟು ಸ್ಪರ್ಧೆ<br>• ಸ್ವಯಂ ಒಗಟು ತಯಾರಿ<br>• GPTA - ಸಂಯುಕ್ತ ಡೈರಿ ಪ್ರದರ್ಶನ<br>• ಕಾವ್ಯೋತ್ಸವ | ಒಗಟು | ಅಧ್ಯಾಪಕರು | ನವೆಂಬರ್ |
| • ಕಥೋತ್ಸವ<br>• ವಿವರಣೆ ಬರೆಯುವುದು<br>• GPTA<br>• ಕಾವ್ಯೋತ್ಸವ<br>• ಪರೀಕ್ಷಾ ತಯಾರಿ | Video | ಅಧ್ಯಾಪಕರು, ರಕ್ಷಕರು | ಡಿಸೆಂಬರ್ |
| • ಶುಭಾಶಯ ಪತ್ರ ನಿರ್ಮಾಣ (ಹೊಸವರುಷ)<br>• ಪತ್ರಿಕೆ ಓದುವಿಕೆ | ಶುಭಾಶಯ ಪತ್ರ | ಅಧ್ಯಾಪಕರು | ಜನವರಿ |

| | | | |
|---|---|---|---|
| • ಜೀವಿಗಳ ಹೆಸ್ರು, ಗಂಡು, ವ್ಯತ್ಯಾಸ ತಿಳಿದುಕೊಂಡು ವಾಕ್ಯಗಳನ್ನು ವೈಯಕ್ತಿಕವಾಗಿ ತಯಾರಿಸಲು ಸಾಧ್ಯವಾಗುವುದು.<br>• ಪದ್ಯಕ್ಕೆ ಸಾಲುಸೇರಿಸುವುದು.<br>• GPTA.<br>• ಕಾವ್ಯೋತ್ಸವ | ಪದ್ಯ | | |
| • ವೈಯಕ್ತಿಕ ವಾಕ್ಯಗಳ ತಯಾರಿ<br>• ವಿವರಣೆ ತಯಾರಿ<br>• ಪದ್ಯ ಬರೆಯುವುದು.<br>• ಒಗಟು ತಯಾರಿ<br>• ಕಲಿಕೋತ್ಸವ<br>• GPTA | ವಿವರಣೆ<br>ಪದ್ಯ<br>ಒಗಟು | ಅಧ್ಯಾಪಕರು | ಫೆಬ್ರವರಿ |
| • ಕಥೆ ಪುಸ್ತಕ ಓದುವುದು<br>• ಸಂಭಾಷಣೆ ತಯಾರಿ<br>• ಕಲಿಕೋತ್ಸವ<br>• ಪತ್ರಿಕಾ ತಯಾರಿ. | ಸಂಭಾಷಣೆ | ಅಧ್ಯಾಪಕರು | ಮಾರ್ಚ್ |

ಗಣಿತ

| ಕಲಿಕಾ ಉದ್ದೇಶ | ಚಟುವಟಿಕೆ | ಉತ್ಪನ್ನ | ಬೆಂಬಲ | ಅವಧಿ |
|---|---|---|---|---|
| 1) ಕಲಿಕಾರ್ಥಿಗಳನ್ನು ಸೌಹಾರ್ದಯುತವಾಗಿ ತರಗತಿಯತ್ತ ಆಕರ್ಷಿಸುವುದು | • ಗಣಿತದ ಆಟಗಳು<br>• ಗಣಿತದ ಕಲಿಕೋಪಕರಣಗಳ ತಯಾರಿ<br>• ಗಣಿತ ಚೀಲ ತಯಾರಿ<br>• ಗಣಿತಕ್ಕೆ ಸಂಬಂಧಿಸಿದ ಹಾಡುಗಳ ಅಭಿನಯ<br>• ಬಣ್ಣ ಹಚ್ಚುವುದು | ಗಣಿತದ ಚೀಲ, ಕಲಿಕೋಪಕರಣಗಳು, ಚಿತ್ರಗಳು | ರಕ್ಷಕರು, ಅಧ್ಯಾಪಕರು | ಜೂನ್ |
| 2) ಸುತ್ತಮುತ್ತಲು ಕಾಣುವ ವಸ್ತುಗಳನ್ನು ನಿರೀಕ್ಷಿಸಿ ಆಕೃತಿಗಳ ಗುರುತಿಸುವಿಕೆ<br>3) ಆಕೃತಿಗಳ ಆಕಾರ ಮತ್ತು ಗಾತ್ರಗಳ ಹೋಲಿಕೆ, ಹೆಸರು ಗುರುತಿಸುವುದು. | • ವಸ್ತುಗಳ ಚಿತ್ರಗಳನ್ನು ನೀಡಿ ಆಕೃತಿಗಳ ಪರಿಚಯ ಮತ್ತು ಹೆಸರಿಸುವುದು.<br>• Shape sorter ಆಟಿಕೆಗಳ ತಯಾರಿ | ಚಿತ್ರಗಳು | ಅಧ್ಯಾಪಕರು | ಜೂನ್-ಜುಲಾಯಿ |
| 4) ದೊಡ್ಡದು / ಸಣ್ಣದು, ಒಳಗೆ ಹೊರಗೆ ಎಂಬೀವುಗಳನ್ನು ತಿಳಿದುಕೊಳ್ಳುವುದು. | • ವಿವಿಧ ವಸ್ತುಗಳನ್ನು ತರಗತಿಯಲ್ಲಿ ಪ್ರದರ್ಶಿಸಿ ಸಣ್ಣದು/ ದೊಡ್ಡದು ವ್ಯತ್ಯಾಸ ತಿಳಿಯುವುದು. | • | ಅಧ್ಯಾಪಕರು | ಜುಲಾಯಿ-ಅಗಸ್ಟ್ |

| | | | | |
|---|---|---|---|---|
| 5) 1 ರಿಂದ 100ರ ವರೆಗಿನ ಅಂಕಿ ಸಂಖ್ಯೆಗಳನ್ನು ತಿಳಿಯುವುದು. | • ವಸ್ತು ಪ್ರದರ್ಶನ<br>• 1 ರಿಂದ 5ರ ವರೆಗಿನ ಸಂಖ್ಯಾ ಕಾರ್ಡ್ ಬಳಸಿ ಸಂಖ್ಯಾಜ್ಞಾನ.<br>• ಗಣಿತ ಕಿಟ್‌ಗೆ ವಸ್ತುಗಳ ನಿರ್ಮಾಣ<br>• ಸಂಖ್ಯೆಗಳನ್ನು ಬರವಣಿಗೆಯ ಮೂಲಕ ತಿಳಿಸುವುದು<br>• ವಸ್ತುಗಳನ್ನು ತೋರಿಸಿ ಅಂಕಿ ತಿಳಿಯಲು | ಸಂಖ್ಯಾಕಾರ್ಡ್ | | |
| 6) ಸಂಕಲನ, ವ್ಯವಕಲನ ಗಣಿತಕ್ರಿಯೆಗಳನ್ನು ತಿಳಿದು ನೈಜಜೀವನದಲ್ಲಿ ಬಳಸಿಕೊಳ್ಳುವ ರೀತಿಯ ಕುರಿತು ತಿಳಿಯುವುದು. | • ಸಂಖ್ಯೆಗಳೊಳಗಿನ ವ್ಯತ್ಯಾಸ ತಿಳಿಯಲು ಸಂಖ್ಯಾಪಟ್ಟಿ<br>• ಉಲ್ಲಾಸಗಣಿತ kit ಬಳಕೆ.<br>• Abacus ಪ್ರದರ್ಶನ<br>• Abacus ನಿರ್ಮಾಣ<br>• ಸಂಖ್ಯಾ ಹೂಮಾಲೆ | • Abacus<br>• ಸಂಖ್ಯಾಮಾಲೆ<br>• ನಮೂನೆಗಳು | ಅಧ್ಯಾಪಕರು | ಸೆಪ್ಟೆಂಬರ್-<br>ಅಕ್ಟೋಬರ್-<br>ನವೆಂಬರ್. |
| 7) ನಮೂನೆಗಳ ನಿರ್ಮಾಣ, ವ್ಯತ್ಯಾಸಗಳನು ತಿಳಿದುಕೊಳ್ಳುವುದು. | • ಸಂಕಲನ, ವ್ಯವಕಲನಕ್ಕೆ ಸಂಬಂಧಿಸಿದ ಕಾರ್ಡ್ ತಯಾರಿ.<br>• ಸಂಖ್ಯಾ ಗೊಂಬೆ ತಯಾರಿ.<br>• ನಮೂನೆಗಳ ನಿರ್ಮಾಣ | | | |
| 8) ಆರೋಹಣ, ಅವರೋಹಣ ಕ್ರಿಯೆಗಳ ಕ್ರಮಗಳ ಕುರಿತು ತಿಳಿಯುವುದು | • ಸಂಖ್ಯಾ ಕಾರ್ಡುಗಳು | | | ನವೆಂಬರ್. |

| | | | | |
|---|---|---|---|---|
| 9) ನೋಟುಗಳ ಪರಿಚಯ | • ನೋಟುಗಳ ನಾಣ್ಯಗಳ ಪ್ರದರ್ಶನ<br>• ಚೆಂಡುಗಳ ಗಾಡಿ ನಿರ್ಮಾಣ<br>• ಗಡಿಯಾರ ನಿರ್ಮಾಣ | ಗಡಿಯಾರದ ಮಾದರಿ | ಅಧ್ಯಾಪಕರು | ಡಿಸೆಂಬರ್ |
| | • ಕ್ಯಾಲೆಂಡರ್ ನಿರ್ಮಾಣ ಮತ್ತು ಪರಿಚಯ.<br>• ಡೂಗಳ ತಯಾರಿ | ಕ್ಯಾಲೆಂಡರ್ | ಅಧ್ಯಾಪಕರು | ಜನವರಿ |
| | • Maths fest<br>• ಸಂಕಲನ, ವ್ಯವಕಲನ ಕ್ರಿಯೆಗಳನ್ನು ಒಟ್ಟಿಗೆ ಮಾಡುವುದು | | | ಫೆಬ್ರವರಿ |
| | • ಕಲಿಕೋತ್ಸವ<br>• ಗಣಿತದ ಆಟಗಳು<br>• ಪರೀಕ್ಷೆಗೆ ತಯಾರಿ. | | | ಮಾರ್ಚ್ |

English

| SL.No | Aims | Activities | Product | Responsibility | Duration |
|---|---|---|---|---|---|
| 1. | To develop listening Reading and Writing skill. | • Picture reading<br>• Description<br>• Rhymes, Action Songs<br>• Product making (vehicle, flower, birds) | Vehicle, flower, bird cards | Class Teacher | June-August |
| 2. | Familirised with the rhythem and pattern of songs | • Rhyming words<br>• Find words from reading materials.<br>• Make word web.<br>• Picture discription | • Rhyming words<br>• word web<br>• description | | September October |
| 3. | To improve communication skills. | • Word chain<br>• Riddles<br>• Lovely conversation<br>• Language games<br>• Story telling. | • Word chain<br>• Riddles<br>• Conversation | | November December<br>December-March. |

# ಅಕಾಡೆಮಿಕ್ ಮಾಸ್ಟರ್ ಪ್ಲಾನ್

## II. ಎ. ತರಗತಿ

ತರಗತಿ ಅಧ್ಯಾಪಕರ ಹೆಸರು : ಕಾವ್ಯ. ಆರ್. ಕೆ

ಶಾಲೆ : ಎಸ್. ಎಂ. ಎಂ. ಎ. ಯು. ಪಿ ಶಾಲೆ, ಮುಂಡಿತ್ತಡ್ಕ

ಕನ್ನಡ :

⇒ ಮಕ್ಕಳಲ್ಲಿ ಸಮಗ್ರ ಗುಣಮಟ್ಟದ ಶಿಕ್ಷಣವನ್ನು ಮುಖ್ಯವಾಹಿನಿಗೆ ತರಲು, ಭಾಷಾ ಅಭಿವೃದ್ಧಿ, ಜ್ಞಾನ, ಸೃಜನಶೀಲತೆ ಮತ್ತು ಭಾವನಾತ್ಮಕ ಕ್ಷೇತ್ರಗಳಲ್ಲಿ ಮಗುವಿನ ಸಾಮರ್ಥ್ಯಗಳನ್ನು ಪರಿಗಣಿಸಿ ತರಗತಿ ಮಟ್ಟದ ಮಾಸ್ಟರ್ ಪ್ಲಾನ್‌ನ್ನು ಸಿದ್ಧಪಡಿಸಲಾಗಿದೆ, ಈ ವರ್ಷ ಪೂರ್ತಿ ಮಕ್ಕಳ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವುದು, ಪ್ರತಿ ಮಗುವಿನ ಗುಣಾತ್ಮಕ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶವಾಗಿದೆ. ಪ್ರತಿ ಮಗು ಎಲ್ಲಾ ವಿಷಯಗಳಲ್ಲಿ ಕೌಶಲ್ಯಗಳನ್ನು ಪಡೆದುಕೊಳ್ಳುವ ಮೂಲಕ ಮತ್ತು ಎಲ್ಲಾ ಹಂತಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸುವ ಮೂಲಕ ಉತ್ತಮ ಶಿಕ್ಷಣದ ಮಾಲೀಕರಾಗಬೇಕು ಎಂಬುದು ಗುರಿಯಾಗಿದೆ.

ಕ್ರಿಯಾ ಉದ್ದೇಶಗಳು.

⇒ ಎರಡನೇ ತರಗತಿಯಲ್ಲಿರುವ ಪ್ರತಿಯೊಂದು ಮಗುವೂ ಸಂದರ್ಭಕ್ಕೆ ಅನುಗುಣವಾಗಿ ಬರವಣಿಗೆ ಮತ್ತು ಮಾತನಾಡುವ ಮೂಲಕ ತಮ್ಮದೇ ಆದ ಭಾಷೆಯಲ್ಲಿ ವಿಚಾರಗಳನ್ನು ಪ್ರಸ್ತುತಪಡಿಸುವ ಸಾಮರ್ಥ್ಯವನ್ನು ಪಡೆಯಲು ಅನುವು ಮಾಡಿಕೊಡುವುದು.

⇒ ಎರಡನೇ ತರಗತಿಯಲ್ಲಿರುವ ಎಲ್ಲಾ ಮಕ್ಕಳ ಓದುವ ಗ್ರಹಿಕೆಯನ್ನು ಖಚಿತಪಡಿಸಿಕೊಳ್ಳಲು

⇒ ತರಗತಿಯಲ್ಲಿರುವ ಎಲ್ಲಾ ಮಕ್ಕಳು ಸ್ಪಷ್ಟವಾಗಿ ಮಾತುಗಾರಿಕೆ ಮತ್ತು ಬರವಣಿಗೆಯಲ್ಲಿ ತೊಡಗಿಕೊಳ್ಳಲು

⇒ ವರ್ಷದ ಕೊನೆಯಲ್ಲಿ ಎಲ್ಲರು ಸ್ವತಂತ್ರ ಬರವಣಿಗೆ ಮತ್ತು ವೈಯಕ್ತಿಕ ಬರವಣಿಗೆಯಲ್ಲಿ ತೊಡಗುತ್ತಾರೆ.

⇒ ಚಿತ್ರವನ್ನು ಆಧಾರವಾಗಿರಿಸಿ ಸಂಭಾಷಣೆ, ಸಣ್ಣ ವಿವರಣೆ ಮತ್ತು ಕಥೆಯನ್ನು ಸಿದ್ಧಪಡಿಸುವುದು.

⇒ ಕಲ್ಪನೆ, ತಾಳ ಮತ್ತು ಲಯವನ್ನು ಪರಿಗಣಿಸಿ ಕವಿತೆಗಳನ್ನು ಬರೆಯುವುದು ಮತ್ತು ಓದುವುದು.

[redacted]

ತ್ರೈಮಾಸಿ:

ಪೂರ್ವ ಪರೀಕ್ಷೆಯನ್ನು ನಡೆಸುವುದು.

ಎಲ್ಲಾ ಹಂತಗಳಲ್ಲಿ ಮಕ್ಕಳನ್ನು ಗುರುತಿಸುವುದು.

ಮಗುವಿನ ಪ್ರಸ್ತುತ ಸ್ಥಿತಿ, ಸಾಮರ್ಥ್ಯಗಳು ಮತ್ತು ಕೊರತೆಗಳನ್ನು ನಿರ್ಧರಿಸಲು, ಪ್ರತಿ ತಿಂಗಳು ಬೆಂಬಲ ಅಗತ್ಯವಿರುವವರಿಗೆ ಪ್ರತ್ಯೇಕ ತರಗತಿಗಳನ್ನು ಒದಗಿಸಲು ಪ್ರತಿ ತಿಂಗಳು CPTA ನಡೆಸಲಾಗುತ್ತದೆ

ಜೂನ್:

⇒ ಚಿತ್ರ ಕಾರ್ಡ್‌ಗಳನ್ನು ಒದಗಿಸುವುದು (ಚಿತ್ರಗಳು, ಪದಗಳು ಒಟ್ಟಿಗೆ)

⇒ ತರಗತಿಯಲ್ಲಿ ಮಾತುಗಾರಿಕೆಗೆ ಅವಕಾಶ ನೀಡುವುದು.

⇒ ಓದುವ ಸಾಮಗ್ರಿಗಳನ್ನು ತಯಾರಿಸುವುದು.

⇒ ಓದುವಿಕೆ ಮತ್ತು ಬರವಣಿಗೆಯನ್ನು ಉತ್ತಮಪಡಿಸಲು ತಂತ್ರಗಳನ್ನು ಅಭಿವೃದ್ಧಿ ಪಡಿಸುವುದು.

ಜುಲೈ

⇒ ಭಾಷೆಗೆ ಸಂಬಂಧಿಸಿದ ಐ.ಸಿ.ಟಿ. ಅವಕಾಶಗಳನ್ನು ಖಚಿತಪಡಿಸಿಕೊಳ್ಳುವುದು.

⇒ ದೈನಂದಿನ ನಿತ್ಯಜೀವನಕ್ಕೆ ಸಂಬಂಧಿಸಿದಂತೆ ಓದುವಿಕೆ ಮತ್ತು ಬರವಣಿಗೆ ಅವಕಾಶಗಳನ್ನು ಖಚಿತ ಪಡಿಸಿಕೊಳ್ಳುವುದು.

⇒ ಶಾಲಾ ಗ್ರಂಥಾಲಯ ಮತ್ತು ತರಗತಿ ಗ್ರಂಥಾಲಯದ ಪ್ರಯೋಜನಪಡಿಸು-ವಿಕೆ

ಆಗಸ್ಟ್

⇒ ತರಗತಿ ಗ್ರಂಥಾಲಯವನ್ನು ಕ್ರಿಯಾತ್ಮಕಗೊಳಿಸುವುದು.

⇒ ಪೋಷಕರ ಬೆಂಬಲವನ್ನು ಖಚಿತಪಡಿಸಿಕೊಳ್ಳುವುದು

⇒ ಮನೆ ಗ್ರಂಥಾಲಯವನ್ನು ಸಿದ್ಧಪಡಿಸುವುದು

⇒ ಚಿತ್ರ ವಿವರಣೆ

⇒ ಓದುವ ಮಟ್ಟವನ್ನು ಉತ್ತಮಪಡಿಸುವುದು ಮತ್ತು ವಿವಿಧ ರೀತಿಯ ರಚನೆಗಳನ್ನು ಅಭಿವೃದ್ಧಿ ಪಡಿಸುವುದು.

ಸೆಪ್ಟೆಂಬರ್

⇒ ಮಕ್ಕಳು ಓದಿದ ಕಥೆಯ ಚಿತ್ರಗಳನ್ನು ತಯಾರಿಸುವುದು

⇒ ಓದಿದ ಕಥೆಯಿಂದ ಸಂಭಾಷಣೆಯನ್ನು ಸಿದ್ಧಪಡಿಸುವುದು

⇒ ಓದಿದ ಕಥೆಯಿಂದ ಪ್ರಶ್ನೆಗಳನ್ನು ತಯಾರಿಸುವುದು

⇒ ಓದಿದ ಕಥೆಯ ಪುನರ್‌ಸಂಸ್ಕಾರ

ಅಕ್ಟೋಬರ್

⇒ ಓದಿದ ಅಥವಾ ಕೇಳಿದ ಕಥೆಗಳು ಮತ್ತು ಸಂಭಾಷಣೆಗಳನ್ನು ಸ್ವಂತ ಭಾಷೆಯಲ್ಲಿ ಪ್ರಸ್ತುತಪಡಿಸಲು ಅವಕಾಶಗಳನ್ನು ನೀಡುವುದು.

⇒ ವಿವಿಧ ರೀತಿಯ ಪಠ್ಯ ರೂಪೀಕರಣ.

ನವೆಂಬರ್

⇒ ಮಕ್ಕಳಿಗೆ ಸ್ವತಂತ್ರ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡುವುದು.

ಡಿಸೆಂಬರ್

⇒ ಬರವಣಿಗೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಸ್ವಂತ ಲೇಖನಗಳನ್ನು ತಯಾರಿಸಲು ಅವಕಾಶಗಳನ್ನು ಒದಗಿಸುವುದು.

ಜನವರಿ

⇒ ಹಾಡುಗಳನ್ನು ಕೇಳಿಸುವುದು, ಹಾಡುವುದು ಮತ್ತು ಸ್ವರಚನೆಗೆ ಅವಕಾಶ ನೀಡುವುದು.

⇒ ಸಣ್ಣ ವಿವರಣೆಗಳು, ಚಿಕ್ಕದಾದ ವಿವರಣೆಗಳನ್ನು ಬರೆಯಲು ಮತ್ತು ಓದಲು ಅವಕಾಶಗಳನ್ನು ಒದಗಿಸುವುದು.

ಫೆಬ್ರವರಿ.

⇒ ಎಲ್ಲಾ ಕ್ಷೇತ್ರಗಳಲ್ಲಿ (ಬರವಣಿಗೆ, ಮಾತುಗಾರಿಕೆ) ಉತ್ತಮ ಮಟ್ಟಕ್ಕೆ ಮಕ್ಕಳು ತಲುಪಲಾಗಿದೆಯೆ ಎಂದು ಖಚಿತಪಡಿಸುವುದು

⇒ ಮಕ್ಕಳು ಸ್ವತಂತ್ರ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡುವುದು.